# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2009-10ನೇ ಸಾಲಿನಲ್ಲಿ ಮೀನುಮರಿ ಖರೀದಿಗೆ ಸಹಾಯಧನ ನೀಡುವ ನೂತನ ಯೋಜನೆಗೆ ಆಡಳಿತಾತ್ಮಕ ಅನುಮೋದನೆ.

ಓದಲಾಗಿದೆ:- ಪತ್ರ ಸಂಖ್ಯೆ:ಪಂವಾಯೋ/35/2008-09 ದಿನಾಂಕ:10-11-2008 ಮತ್ತು ದಿನಾಂಕ:20-03-2009.

******

**ಪ್ರಸ್ತಾವನೆ:**

ಮೀನುಗಾರಿಕೆ ನಿರ್ದೇಶಕರು ಮೇಲೆ ಓದಲಾದ ಪತ್ರಗಳಲ್ಲಿ ಮೀನುಗಾರಿಕೆ ಇಲಾಖೆಯು ರಾಜ್ಯದಲ್ಲಿ ಒಳನಾಡಿನ ಎಲ್ಲಾ ಜಲಸಂಪನ್ಮೂಲಗಳನ್ನು ಮೀನು ಪಾಲನೆಗೆ ಅಳವಡಿಸುವ ಬಗ್ಗೆ ಕಳೆದ ಐದು ದಶಕಗಳಿಂದ ಶ್ರಮಿಸುತ್ತಾ ಬಂದಿದ್ದು, ಅದರ ಫಲವಾಗಿ ಸಾಂಪ್ರದಾಯಿಕ ಕಸುಬಾಗಿದ್ದ ಮೀನುಗಾರಿಕೆಯು ಇಂದು ತಾಂತ್ರಿಕತೆ ಆಧಾರಿತ ಉದ್ಯಮವಾಗಿದ್ದು, ಮೀನುಗಾರಿಕೆ ಅಭಿವೃದ್ಧಿಗೆ ಉತ್ತಮ ತಳಿಯ ಮೀನುಮರಿ ಪ್ರಮುಖವಾಗಿದ್ದು, ಸೂಕ್ತ ಸಮಯದಲ್ಲಿ ಸೂಕ್ತ ತಳಿಯ ಮೀನುಮರಿಗಳ ಲಭ್ಯತೆಗನುಗುಣವಾಗಿ ಆಯ್ದ ಜಲಪ್ರದೇಶಗಳಲ್ಲಿ ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ. ರಾಜ್ಯದಲ್ಲಿ ವಾರ್ಷಿಕ ಸುಮಾರು 2200 ಲಕ್ಷ ಫ್ರೈ ಮೀನುಮರಿಗಳನ್ನು ಉತ್ಪಾದಿಸಲಾಗುತ್ತಿದ್ದು, ಇದು ಸಾಕಾಗದೆ ಬಿತ್ತನೆ ಮೀನುಮರಿಗಳನ್ನು ಹೊರ ರಾಜ್ಯಗಳಿಂದಲೂ ಖರೀದಿಸಲಾಗುತ್ತಿದ್ದು, ಹೊರ ರಾಜ್ಯಗಳಿಂದ ತಂದ ಮೀನುಮರಿಗಳನ್ನು ಇಲಾಖೆ ದರಕ್ಕಿಂತ ಕಡಿಮೆ ದರದಲ್ಲಿ ಇನ್ನೂ ಕೆಲವೊಮ್ಮೆ ಅತೀ ದುಬಾರಿ ಬೆಲೆಯಲ್ಲಿ ಸರಬರಾಜು ಆಗುತ್ತಿದ್ದರೂ ಈ ಮೀನುಮರಿಗಳ ಗುಣಮಟ್ಟದ ಬಗ್ಗೆ ಖಾತ್ರಿ ಇರುವುದಿಲ್ಲವೆಂದು ತಿಳಿಸುತ್ತಾ, ಮೀನುಮರಿ ಕೇಂದ್ರಗಳಲ್ಲಿ ಉತ್ಪಾದಿಸುವ ಗುಣಮಟ್ಟದ ಮೀನುಮರಿಗಳನ್ನು ಖರೀದಿಸಲು ಮೀನು ಕೃಷಿಕರಿಗೆ ಪ್ರೋತ್ಸಾಹ ನೀಡಲು ಸಹಾಯಧನ ಒದಗಿಸುವುದು ಅತ್ಯಗತ್ಯವಾಗಿದ್ದು, ಮೀನುಗಾರರು ಹಾಗೂ ಮೀನು ಕೃಷಿಕರು ಸ್ಪರ್ಧಾತ್ಮಕವಾಗಿ ಟೆಂಡರ್ ಮತ್ತು ಹರಾಜಿನಲ್ಲಿ ಭಾಗವಹಿಸಿ ಅಥವಾ ಸಂಘಗಳ ಮೂಲಕ ಇಲಾಖೆ ನಿಗದಿಪಡಿಸಿದ ಗುತ್ತಿಗೆ ಮೊತ್ತವನ್ನು ಪಾವತಿಸಿ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಪಡೆದು ಅತೀ ಶೀಘ್ರ ಬೆಳೆಯುವ ಮೀನುಮರಿಗಳಿಗಾಗಿ ಮತ್ತು ಆಹಾರಕ್ಕಾಗಿ ಹೆಚ್ಚು ಬಂಡವಾಳ ಹೂಡಿ ಕೊಳ/ಕೆರೆಗಳಲ್ಲಿ ಮೀನು ಪಾಲನೆಯನ್ನು ಕೈಗೊಳ್ಳಲು ಅನುವಾಗುವಂತೆ ಮೀನು ಕೃಷಿಕರಿಗೆ ಮೀನುಮರಿ ಖರೀದಿಯ ಮೇಲೆ ಶೇ.75ರಷ್ಟು ಪ್ರೋತ್ಸಾಹ ಧನ ನೀಡಲು ಕೋರಿರುತ್ತಾರೆ.

ಮೀನುಗಾರಿಕೆ ಇಲಾಖೆಯ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳು, ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ), ಮೈಸೂರಿನ ಫಾರಂಗಳು ಹಾಗೂ ಮೀನುಗಾರಿಕೆ ಇಲಾಖೆಯು ಅನುಮೋದಿತ ಖಾಸಗಿ ಮೀನುಮರಿ ಕೇಂದ್ರಗಳಿಂದ ಖರೀದಿಸಿದ ಎಲ್ಲಾ ತಳಿಗಳ ಮೀನುಮರಿಗಳ ಬೆಲೆಯ ಶೇ.75ರಷ್ಟು ಅಂದರೆ ವ್ಯಕ್ತಿಯೊಬ್ಬರಿಗೆ ಗರಿಷ್ಠ ರೂ.15,000-00 ಗಳ ಸಹಾಯಧನವನ್ನು ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.30,000-00 ಮಿತಿಗೊಳಪಟ್ಟು ಸಹಾಯಧನವನ್ನು ನೀಡಬಹುದಿದ್ದು, ಇದರಿಂದ ಮೀನು ಕೃಷಿಕರಿಗೆ ಒಳ್ಳೆಯ ತಳಿಯ ಮೀನುಮರಿ ದೊರೆತಂತಾಗುತ್ತದೆ. ಇದಲ್ಲದೆ ಮೀನು ಕೃಷಿಗೆ ಪ್ರೋತ್ಸಾಹ ನೀಡಿದಂತೆ ಆಗುವುದರಿಂದ ಈ ಸಂಬಂಧ ಮೀನುಮರಿ ಖರೀದಿಗೆ ಸಹಾಯಧನ ಎಂಬ ನೂತನ ಯೋಜನೆಯನ್ನು ಪ್ರಾರಂಭಿಸಿ ಲೆಕ್ಕಶೀರ್ಷಿಕೆ 2405–ಮೀನುಗಾರಿಕೆ-00-101–ಒಳನಾಡು ಮೀನುಗಾರಿಕೆ–0-03–ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಯೋಜನೆಯಡಿ ಹೊಸ ಘಟಕವಾಗಿ ಅಳವಡಿಸಿ ಈ ಯೋಜನೆಗೆ ತಗಲುವ ವೆಚ್ಚವನ್ನು 2009-10ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2405–ಮೀನುಗಾರಿಕೆ–00-101-ಒಳನಾಡು ಮೀನುಗಾರಿಕೆ–0-28–ಮೀನುಮರಿ ಖರೀದಿಸಲು ಸಹಾಯಧನ (106)(422) ಮತ್ತು (423) ಅಡಿ ಒದಗಿಸಿದ ಅನುದಾನ ರೂ.50.00 ಲಕ್ಷಗಳಿಂದ ಭರಿಸಿ ಅನುಷ್ಠಾನಗೊಳಿಸಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ:ಪಸಂಮೀ 146 ಮೀಇಯೋ 2008, ಬೆಂಗಳೂರು ದಿನಾಂಕ:22-05-2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ 2009-10ನೇ ಸಾಲಿನಿಂದ ಜಾರಿಗೆ ಬರುವಂತೆ ಮೀನುಮರಿ ಖರೀದಿಗೆ ಗರಿಷ್ಠ ಸಹಾಯಧನದ ಮಿತಿಯನ್ನು ಶೇ.50%ಕ್ಕೆ ಮಿತಿಗೊಳಿಸಿ ಒಬ್ಬರಿಗೆ ಗರಿಷ್ಠ ರೂ.5,000-00 (ಐದು ಸಾವಿರ ರೂಪಾಯಿಗಳು ಮಾತ್ರ)ಗಳ ಹಾಗೂ ಸಹಕಾರಿ ಸಂಘಗಳಿಗೆ ಮತ್ತು ನೋಂದಾಯಿತ ಸಂಘ, ಸಂಸ್ಥೆಗಳಿಗೆ ಗರಿಷ್ಠ ರೂ.20,000-00 (ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ಮಿತಿಗೆ ಒಳಪಟ್ಟು ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಮೀನುಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಮೀನು ಕೃಷಿಕರ ಅಭಿವೃದ್ಧಿ ಮತ್ತು ತುಂಗಭದ್ರಾ ಮಂಡಳಿ ಮತ್ತು ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿಗಳ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸುವ ಮೀನುಮರಿಗಳಿಗೆ ಮಾತ್ರ ಈ ಸೌಲಭ್ಯವನ್ನು ನೀಡಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ರೂ.50.00 ಲಕ್ಷವನ್ನು ಲೆಕ್ಕ ಶೀರ್ಷಿಕೆ 2405–ಮೀನುಗಾರಿಕೆ–00-101–ಒಳನಾಡು ಮೀನುಗಾರಿಕೆ–0-28 ಮೀನುಮರಿ ಖರೀದಿಸಲು ಸಹಾಯಧನ (106), (422) ಮತ್ತು (423) (ಯೋಜನೆ) ಯಡಿಯಲ್ಲಿ 2009-10ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ/57/ಪಿಎಫ್ಒ/2008 ದಿನಾಂಕ:11-12-2008ರಲ್ಲಿ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/531/ವೆಚ್ಚ–4/ 2008 ದಿನಾಂಕ:19-03-2009 ಮತ್ತು ದಿನಾಂಕ: 26-03-2009ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಸಹಿ/–
(ಡಿ.ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

// ನಕಲು //

ಸಂಖ್ಯೆ: ಪಂಪಾಯೋ/35/2008-09

ಮೀನುಗಾರಿಕೆ ನಿರ್ದೇಶನಾಲಯ,
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಕೇಂದ್ರ, ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-1, ದಿ:26-5-2009.

ಸರ್ಕಾರದ ಆದೇಶ ಸಂಖ್ಯೆ: 146 ಮೀಇಯೋ 2008 ದಿನಾಂಕ 22-5-2009ರ ಆದೇಶವನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

ಮೀನುಗಾರಿಕೆ ನಿರ್ದೇಶಕರ ಪರವಾಗಿ.

ಗೆ:

ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ
ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
ಕೇಂದ್ರ ಕಛೇರಿಯ ಎಲ್ಲಾ 'ಎ' ಮತ್ತು 'ಬಿ' ವರ್ಗದ ಅಧಿಕಾರಿಗಳಿಗೆ
ಪ್ರತಿ: ಎಫ್ಐಎಸ್ಪಿ, ಐಎನ್ಎಲ್, ಸಂಕಲನಕ್ಕೆ
ಪ್ರತಿ: ಬಿಜೆಟ್ ಸಂಕಲನಕ್ಕೆ ಎನ್.ಎಂ.ಸಿ.ಯಲ್ಲಿ ನಮೂದಿಸಲು ಕೋರಿದೆ.
ಪ್ರತಿ: ಪಂಪಾಯೋ ದಾಸ್ತಾನು ಕಡತಕ್ಕೆ

ಆದೇಶ ಸಂಖ್ಯೆ:ಪಸಂಮೀ/146/ಮೀಇಯೋ/2008, ಬೆಂಗಳೂರು ದಿನಾಂಕ:22-05-2009ರ ಅನುಬಂಧ

ಮೀನುಮರಿ ಉತ್ಪಾದನೆ, ಪಾಲನೆ ಮತ್ತು ವಿತರಣೆ ಯೋಜನೆಯಡಿ ಇಲಾಖೆ ಮೀನುಮರಿ ಖರೀದಿಸಿದ ಕೃಷಿಕರಿಗೆ ಸಹಾಯಧನ ನೀಡುವ ಕುರಿತು

## ಷರತ್ತು ಮತ್ತು ನಿಬಂಧನೆಗಳು

1) ಈ ಯೋಜನೆ ರಾಜ್ಯದ ಕೆರೆಗಳನ್ನು ಗುತ್ತಿಗೆ ಅಥವಾ ಟೆಂಡರ್ ಮತ್ತು ಹರಾಜಿನಲ್ಲಿ ಪಡೆದು ಮೀನುಗಾರಿಕೆ ಇಲಾಖೆ ಮೀನುಮರಿ ಕೇಂದ್ರಗಳಿಂದ, ಸರ್ಕಾರಿ ಸ್ವಾಮ್ಯದ ಮೀನುಮರಿ ಕೇಂದ್ರ ಗಳಿಂದ ಮಾತ್ರ ಖರೀದಿಸಿ ದಾಸ್ತಾನು ಮಾಡಿದ ಬಿತ್ತನೆ ಮೀನುಮರಿಗಳ ಮೌಲ್ಯದ ಶೇ.50 ರಷ್ಟು ಪ್ರತಿ ಫಲಾನುಭವಿಗೆ ಗರಿಷ್ಠ ರೂ.5,000-00 (ಐದು ಸಾವಿರ ರೂಪಾಯಿಗಳು ಮಾತ್ರ)ಗಳಿಗೆ ಹಾಗೂ ಫಲಾನುಭವಿಯು ನೋಂದಾಯಿತ ಸಂಘ ಸಂಸ್ಥೆಗಳಾಗಿದ್ದಲ್ಲಿ ಗರಿಷ್ಠ ರೂ.20,000-00 (ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ)ಗಳಿಗೆ ಮಿತಿಗೊಳಿಸಿ ಸಹಾಯಧನ ನೀಡುವುದು.

2) ಈ ಯೋಜನೆಯು ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ಕೆರೆಗಳು, ಇಲಾಖಾ ಕೆರೆಗಳು ಹಾಗೂ ಖಾಸಗಿ ಮೀನು ಕೃಷಿ ಕೊಳಗಳಲ್ಲಿ ದಾಸ್ತಾನು ಮಾಡಿದ ಮೀನುಮರಿಗಳಿಗೆ ಅನ್ವಯಿಸುತ್ತದೆ.

3) ಈ ಯೋಜನೆಯಡಿ ನೀಡುವ ಸಹಾಯಧನವು ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ ಒಟ್ಟು 2,000 ಮೀನುಮರಿಗಳನ್ನು ಮಾತ್ರ ಬಿತ್ತನೆಗೆ ಪರಿಗಣಿಸಿ ಸಹಾಯಧನವನ್ನು ನೀಡಲಾಗುವುದು.

4) ಈ ಸಹಾಯಧನವನ್ನು ಸರ್ಕಾರಿ ಸ್ವಾಮ್ಯದ ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳು ಹಾಗೂ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ, ತುಂಗಭದ್ರಾ ಮಂಡಳಿ ಹಾಗೂ ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿಯ ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳಿಂದ ಖರೀದಿಸಿದ ಮೀನುಮರಿಗಳಿಗೆ ಮಾತ್ರ ನೀಡಲಾಗುವುದು.

5) ಸಹಾಯಧನವನ್ನು ಮಂಜೂರು ಮಾಡುವ ಅಧಿಕಾರವು ಆಯಾ ವಲಯದ ಮೀನುಗಾರಿಕೆ ಉಪನಿರ್ದೇಶಕರಲ್ಲಿ ಪ್ರದತ್ತವಾಗಿರುತ್ತದೆ.

6) ನಿಷೇಧಿತ ಮೀನು "ಆಫ್ರಿಕನ್ ಕ್ಯಾಟ್‌ಫಿಶ್" ಮರಿಗಳ ಸಾಗಣೆ ಅಥವಾ ಸಾಕಣೆ ಕೈಗೊಳ್ಳಲಾಗಿದೆಯೆಂದು ತಿಳಿದುಬಂದಲ್ಲಿ ಅಂತಹವರಿಗೆ ಯಾವುದೇ ರೀತಿಯ ಸಹಾಯಧನವನ್ನು ನೀಡಲಾಗುವುದಿಲ್ಲ.

## ಸಹಾಯಧನ ಮಂಜೂರು ಮಾಡುವ ಕಾರ್ಯವಿಧಾನ

1. ಕೆರೆಯನ್ನು ಟೆಂಡರ್ ಮತ್ತು ಹರಾಜಿನಲ್ಲಿ ಪಡೆದ ಗುತ್ತಿಗೆದಾರರು/ಬಿಡ್‌ದಾರರು ಕೆರೆಯನ್ನು ಗುತ್ತಿಗೆ ಅಥವಾ ಟೆಂಡರ್‌ನಲ್ಲಿ ಪಡೆದ ಆದೇಶದ ಪ್ರತಿಯೊಡನೆ ಹಾಗೂ ದಾಸ್ತಾನು ಮಾಡಿದ ಮೀನುಮರಿಗಳ ಮೂಲ ಖರೀದಿ ಬಿಲ್ಲಿನೊಡನೆ ಸ್ಥಳೀಯ ಸಂಬಂಧಿಸಿದ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ಅಥವಾ (ಶ್ರೇಣಿ-1) ರವರಿಗೆ ಮೀನುಮರಿಗಳನ್ನು ಖರೀದಿಸಿದ ಒಂದು ತಿಂಗಳೊಳಗಾಗಿ ಅರ್ಜಿ ಸಲ್ಲಿಸಿ ಸಹಾಯಧನ ಕೋರಬೇಕು.
2. ಸಹಾಯಧನವನ್ನು ಕೋರಿ ಬಂದ ಅರ್ಜಿಗಳನ್ನು ತಾಲ್ಲೂಕಿನ ಮೀನುಗಾರಿಕೆ ಅಧಿಕಾರಿಯವರು ಪರಿಶೀಲಿಸಿ ವಿವರಗಳು ಸರಿಯಿರುವ ಬಗ್ಗೆ ದೃಢೀಕರಿಸಿ, ಜಿಲ್ಲಾ ಮಟ್ಟದ ಅಧಿಕಾರಿಯವರಿಗೆ ಒಂದು ವಾರದೊಳಗಾಗಿ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

3. ಸಹಾಯಧನ ಕೋರಿ ಬಂದ ಅರ್ಜಿಗಳನ್ನು, ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಯು ಮತ್ತೊಮ್ಮೆ ಪರಿಶೀಲಿಸಿ ವಿವರಗಳನ್ನು ದೃಢೀಕರಿಸಿ ಒಂದು ವಾರದೊಳಗಾಗಿ ಸಂಬಂಧಿಸಿದ ಮೀನುಗಾರಿಕೆ ಉಪನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

4. ಮೀನುಮರಿ ಖರೀದಿಯ ಸಹಾಯಧನಕ್ಕೆ ಕೋರಿ ಬಂದ ಅರ್ಜಿಗಳನ್ನು ಮೀನುಗಾರಿಕೆ ಉಪನಿರ್ದೇಶಕರು ಪರಿಶೀಲಿಸಿ ಅರ್ಹ ಅರ್ಜಿಗಳನ್ನು ಪರಿಗಣಿಸಿ ಸಹಾಯಧನವನ್ನು ಮಂಜೂರು ಮಾಡತಕ್ಕದ್ದು, ಹೀಗೆ ಮಂಜೂರು ಮಾಡಿದ ಸಹಾಯಧನದ ಸ್ವೀಕೃತನ ರಸೀದಿ (ಪೇಯೀಸ್ ರಸೀದಿ) ಬಿಲ್ಲನ್ನು ಸಂಬಂಧಿಸಿದ ತಾಲ್ಲೂಕು ಮೀನುಗಾರಿಕೆ ಅಧಿಕಾರಿ ಪಡೆದು ಫಲಾನುಭವಿಯ ಸಹಿಯನ್ನು ದೃಢೀಕರಿಸಿ ಜಿಲ್ಲಾ ಮೀನುಗಾರಿಕೆ ಅಧಿಕಾರಿಯಿಂದ ಮೇಲು ರುಜು ಪಡೆದು ಸಹಾಯಧನ ಪಾವತಿಸಲು ಕ್ರಮವಹಿಸುವುದು.

5. ಫಲಾನುಭವಿಗಳು ಆರ್ಥಿಕ ವರ್ಷದಲ್ಲಿ ದಾಸ್ತಾನು ಮಾಡಿದ ಮೀನು ಮರಿಗಳಿಗೆ ಸಹಾಯಧನವನ್ನು ಆ ಆರ್ಥಿಕ ವರ್ಷದಲ್ಲೇ ಪಡೆಯಲು ಅರ್ಜಿಗಳನ್ನು ಸಲ್ಲಿಸತಕ್ಕದ್ದು.

6. ಅನುದಾನದ ಕೊರತೆಯಿಂದ ಹಾಗೂ ಇನ್ನಿತರ ಕಾರಣಗಳಿಂದ ಆ ಆರ್ಥಿಕ ವರ್ಷದಲ್ಲಿ ಸಹಾಯಧನ ಕೋರಿ ಬಂದ ಅರ್ಜಿಗಳನ್ನು ಪರಿಗಣಿಸಲು ಸಾಧ್ಯವಾಗದಿದ್ದಲ್ಲಿ, ಅರ್ಜಿಗಳ ಜೇಷ್ಠತಾ ಪಟ್ಟಿಯನ್ನು ತಯಾರು ಮಾಡಿ ಮುಂದಿನ ವರ್ಷದ ಪ್ರಾರಂಭದಲ್ಲಿ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಮೀನುಗಾರಿಕೆ ಉಪ ನಿರ್ದೇಶಕರು ಸಹಾಯಧನವನ್ನು ಮಂಜೂರು ಮಾಡುವುದು.

ಸಹಿ/-
(ಡಿ.ಎಂ.ರಾಜಣ್ಣ)

ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಮೀನುಗಾರಿಕೆ ನಿರ್ದೇಶಕರ ಪರವಾಗಿ